ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ ಎಸ್‌ಪಿಎಸ್ 01 2016

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:01-08-2017.

## ಸುತ್ತೋಲೆ

ವಿಷಯ: ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾರ್ಯಕ್ರಮದಡಿ ಲ್ಯಾಪ್‌ಟಾಪ್‌ಗಳನ್ನು ನೀಡುವ ಬಗ್ಗೆ.

ಉಲ್ಲೇಖ 1) ಈ ಕಛೇರಿಯ ಪತ್ರ ಸಂಖ್ಯೆ: ಡಿಟಿಇ 01 ಎಸ್‌ಪಿಎಸ್(1) 2016 ದಿನಾಂಕ:10/04/2017

2) ಸರ್ಕಾರದ ಆದೇಶ ಸಂಖ್ಯೆ: ಇಡಿ 04 ಹೆಚ್‌ಪಿಸಿ 2017 ಬೆಂಗಳೂರು ದಿ:24/06/2017.

3) ಸಂಖ್ಯೆ: ಆಇ 732 ವೆಚ್ಚ-12/17 ಕರ್ನಾಟಕ ಸರ್ಕಾರದ ಸಚಿವಾಲಯ ವಿಧಾನಸೌಧ ಬೆಂಗಳೂರು ದಿ:05/07/2017 ರ ಅಧಿಸೂಚನೆ.

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ 2016-17ನೇ ಸಾಲಿನಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕುಟುಂದ ವಾರ್ಷಿಕ ಆದಾಯ ರೂ. 2.5 ಲಕ್ಷಕ್ಕಿಂತ ಕಡಿಮೆಯಿರುವ ಅರ್ಹ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ಒದಗಿಸುವ ಸಂಬಂಧ ಉಲ್ಲೇಖ (1) ರ ಪತ್ರದನ್ವಯ ಮಾಹಿತಿಯನ್ನು ಕೋರಿದ್ದು, ಅದಕ್ಕೆ ಸಂಬಂದಪಟ್ಟಂತೆ ಸಂಸ್ಥೆಯ ಪ್ರಾಂಶುಪಾಲರುಗಳು ಕೇಂದ್ರ ಕಛೇರಿಗೆ ಮಾಹಿತಿಯನ್ನು ನೀಡಿರುವುದು ಸರಿಯಷ್ಟೇ. ಉಲ್ಲೇಖ (1) ರ ಸುತ್ತೋಲೆ ಅನ್ವಯ ಸುತ್ತೋಲೆಯ ಜೊತೆಯಲ್ಲಿ ಲಗತ್ತಿಸಿದ್ದ ನಮೂನೆಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ 2016-17 ನೇ ಸಾಲಿನಲ್ಲಿ ಪ್ರಥಮ ವರ್ಷ, ದ್ವಿತೀಯಾ ವರ್ಷ, ತೃತೀಯಾ ವರ್ಷಗಳಲ್ಲಿ ವ್ಯಾಸಂಗ ಮಾಡಿದ್ದು ತದನಂತರ 2017-18 ನೇ ಸಾಲಿನಲ್ಲಿ ಅನುಕ್ರಮವಾಗಿ ದ್ವಿತೀಯಾ ವರ್ಷ, ತೃತೀಯಾ ವರ್ಷ, ನಾಲ್ಕನೇ ವರ್ಷಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಿವರಗಳನ್ನು ಈಗಾಗಲೇ ನೀಡಲಾಗಿರುವ ನಮೂನೆಯಲ್ಲಿ ನಿಖರವಾಗಿ, ಜರೂರಾಗಿ ಸಿದ್ಧಪಡಿಸಿಕೊಳ್ಳತಕ್ಕದ್ದು. ಅದೇ ರೀತಿ ಮುಂದುವರಿದು 2016-17 ನೇ ಸಾಲಿನಲ್ಲಿ ಸಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮೊದಲನೇ ವರ್ಷದ ಡಿಪ್ಲೊಮೊ, ಎರಡನೇ ವರ್ಷದ ಡಿಪ್ಲೊಮೊ ವ್ಯಾಸಂಗ ಮಾಡಿದ್ದು 2017-18 ನೇ ಸಾಲಿನಲ್ಲಿ ಅನುಕ್ರಮವಾಗಿ ದ್ವಿತೀಯಾ ವರ್ಷ ಹಾಗೂ ತೃತೀಯಾ ವರ್ಷದ ಡಿಪ್ಲೊಮೊಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ 2.5 ಲಕ್ಷಗಳಿಗಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಿವರಗಳನ್ನು ಈಗಾಗಲೇ ತಿಳಿಸಿರುವ ನಮೂನೆಯಲ್ಲಿ ನಿಖರವಾಗಿ ಸಿದ್ಧಪಡಿಸಿಕೊಳ್ಳತಕ್ಕದ್ದು.

ಸರ್ಕಾರಿ ಇಂಜಿನಿಯರಿಗ್ ಕಾಲೇಜ್‌ಗಳು ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ 2016-17 ನೇ ಸಾಲಿನಲ್ಲಿ ಪ್ರವೇಶ ಪಡೆದು 2017-18 ನೇ ಸಾಲಿನಲ್ಲಿ ಸರ್ಕಾರಿ ಇಂಜಿನಿಯರಿಗ್ ಕಾಲೇಜ್‌ಗಲ್ಲಿ ಅನುಕ್ರಮವಾಗಿ ಎರಡನೇ ವರ್ಷ, ಮೂರನೇ ವರ್ಷ ಹಾಗೂ ನಾಲ್ಕನೇ ವರ್ಷಗಳಲ್ಲಿ ಓದುತ್ತಿರುವ ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಎರಡನೇ ವರ್ಷ ಹಾಗೂ ಮೂರನೇ ವರ್ಷಡಿಪ್ಲೊಮೊ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ನಿಖರವಾದ ಅಂಕಿಅಂಶಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿಮಾಡಿ ದಿನಾಂಕ:19/08/2017ರ ಒಳಗಾಗಿ ಸಾಫ್ಟ್ ಕಾಪಿಯನ್ನು ಈ ಮುಂದೆ ನಮೂದಿಸಿರುವ ಇ-ಮೇಲ್ ವಿಳಾಸಗಳಿಗೆ ಕಳುಹಿಸಬೇಕೆಂದು ತಿಳಿಸಲಾಗಿದೆ. ಅಲ್ಲದೆ ಸದರಿ ಮಾಹಿತಿಯ ಹಾರ್ಡ್ ಕಾಪಿಯನ್ನು ಸಹ ತಪ್ಪದೇ ಕೇಂದ್ರ ಕಛೇರಿಗೆ ಅಂಚೆಯ ಮೂಲಕ ಕಳುಹಿಸಲು ತಿಳಿಸಲಾಗಿದೆ.

raviyappa@yahoo.co.in

srinivas.uvse@gmail.com

sps.dte.@gmail.com

ಈ ಸಂಬಂಧ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಬಗ್ಗೆ ನೀಡುವ ಅಂಕಿಅಂಶಗಳು ಅತ್ಯಂತ ನಿಖರವಾಗಿರಬೇಕೆಂದು ಹಾಗೂ ಪ್ರಾಂಶುಪಾಲರು ಅತ್ಯಂತ ಜಾಗರೂಕತೆಯಿಂದ ಅಂಕಿಅಂಶಗಳನ್ನು ನೀಡಬೇಕೆಂದು ಈ ಮೂಲಕ ಸೂಚಿಸಲಾಗಿದೆ. ಅಂಕಿಅಂಶಗಳು ವ್ಯತ್ಯಾಸವಾದಲ್ಲಿ ಸಂಸ್ಥೆಯ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ನಿರ್ದೇಶಕರು

ಇವರಿಗೆ:

1. ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ ಇಂಜಿನೀಯರಿಗ್ ಕಾಲೇಜುಗಳು ಮತು ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ.
2. ಇ-ಆಡಳಿತ ವಿಭಾಗ, ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು

<u>ನಮೂನೆ-1</u>

2016-17ನೇ ಸಾಲಿನ ಸರ್ಕಾರಿ ಇಂಜಿನಿಯರಿಂಗ್‌ಕಾಲೇಜು ಸಂಸ್ಥೆಗಳಲ್ಲಿ ಪ್ರವೇಶ ಪಡೆದು 2017-18ನೇ ಸಾಲಿನಲ್ಲಿ ಅನುಕ್ರಮವಾಗಿ 2/3/4ನೇ ವರ್ಷಗಳ ತರಗತಿಗಳಲ್ಲಿ ಕುಟುಂಬದ ವಾರ್ಷಿಕ ವರಮಾನ ರೂ.2.5 ಲಕ್ಷಗಳು( ರೂಪಾಯಿ ಎರಡು ಲಕ್ಷದ ಐವತ್ತು ಸಾವಿರ ಮಾತ್ರ) ಗಳಗಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಅಂಕಿಅಂಶಗಳ ವಿವರ.

ಪ್ರಾಂಶುಪಾಲರ ಹೆಸರು:
ಇ-ಮೇಲ್ ವಿಳಾಸ :
ಮೊಬೈಲ್ ಸಂಖ್ಯೆ :

| ಕ್ರ. ಸಂ | ಸಂಸ್ಥೆಯ ಹೆಸರು ಮತ್ತು ವಿಳಾಸ | 2017-18ನೇ ಸಾಲಿನ ಬಿ.ಇ. ದ್ವಿತೀಯ ವರ್ಷ | | 2017-18ನೇ ಸಾಲಿನ ಬಿ.ಇ. ತೃತೀಯ ವರ್ಷ | | 2017-18ನೇ ಸಾಲಿನ ಬಿ.ಇ. ಅಂತಿಮ ವರ್ಷ | | ಒಟ್ಟು | | ಒಟ್ಟು ಪ.ಜಾ ಮತ್ತು ಪ.ಪಂ. ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|---|---|---|---|---|
| | | ಪ.ಜಾ | ಪ.ಪಂ | ಪ.ಜಾ | ಪ.ಪಂ | ಪ.ಜಾ | ಪ.ಪಂ | ಪ.ಜಾ | ಪ.ಪಂ | |
| | | | | | | | | | | |

ದಿನಾಂಕ:

ಸ್ಥಳ:

ಪ್ರಾಂಶುಪಾಲರ ಸಹಿ
ಹೆಸರು:
**ಮೊಹರು:**

**ವಿಶೇಷ ಸೂಚನೆ:**-ಮೇಲ್ಕಂಡ ನಮೂನೆಯಲ್ಲಿ ಅಂಕಿಅಂಶಗಳನ್ನು ನಿಖರವಾಗಿ ಭರ್ತಿಮಾಡಿ ಪ್ರಾಂಶುಪಾಲರು ಸಹಿ ಮತ್ತು ಸೀಲು ಹಾಕಿ, ಸ್ಕ್ಯಾನ್ ಮಾಡಿ ಇ-ಮೇಲ್ ಜೊತೆಯಲ್ಲಿ ಲಗತ್ತಿಸಿ ಕಳುಹಿಸತಕ್ಕದ್ದು.

# ನಮೂನೆ-2

2016-17ನೇ ಸಾಲಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಪ್ರವೇಶ ಪಡೆದು 2017-18ನೇ ಸಾಲಿನಲ್ಲಿ ಅನುಕ್ರಮವಾಗಿ 2/3ನೇ ವರ್ಷಗಳ ತರಗತಿಗಳಲ್ಲಿ ಕುಟುಂಬದ ವಾರ್ಷಿಕ ವರಮಾನ ರೂ.2.5 ಲಕ್ಷಗಳು ( ರೂಪಾಯಿ ಎರಡು ಲಕ್ಷದ ಐವತ್ತು ಸಾವಿರ ಮಾತ್ರ) ಗಳಗಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಅಂಕಿಅಂಶಗಳ ವಿವರ.

ಪ್ರಾಂಶುಪಾಲರ ಹೆಸರು:
ಇ-ಮೇಲ್ ವಿಳಾಸ :
ಮೊಬೈಲ್ ಸಂಖ್ಯೆ :

| ಕ್ರ. ಸಂ | ಸಂಸ್ಥೆಯ ಹೆಸರು ಮತ್ತು ವಿಳಾಸ | 2017-18ನೇ ಸಾಲಿನ ಡಿಪ್ಲೊಮಾ. ದ್ವಿತೀಯ ವರ್ಷ | | 2017-18ನೇ ಸಾಲಿನ ಡಿಪ್ಲೊಮಾ. ತೃತೀಯ ವರ್ಷ | | ಒಟ್ಟು | | ಒಟ್ಟು ಪ.ಜಾ ಮತ್ತು ಪ.ಪಂ. ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|---|---|---|
| | | ಪ.ಜಾ | ಪ.ಪಂ | ಪ.ಜಾ | ಪ.ಪಂ | ಪ.ಜಾ | ಪ.ಪಂ | |
| | | | | | | | | |

ದಿನಾಂಕ:

ಸ್ಥಳ:

ಪ್ರಾಂಶುಪಾಲರ ಸಹಿ
ಹೆಸರು:
ಮೊಹರು:

**ವಿಶೇಷ ಸೂಚನೆ:**-ಮೇಲ್ಕಂಡ ನಮೂನೆಯಲ್ಲಿ ಅಂಕಿಅಂಶಗಳನ್ನು ನಿಖರವಾಗಿ ಭರ್ತಿಮಾಡಿ ಪ್ರಾಂಶುಪಾಲರು ಸಹಿ ಮತ್ತು ಸೀಲು ಹಾಕಿ, ಸ್ಕ್ಯಾನ್ ಮಾಡಿ ಇ-ಮೇಲ್ ಜೊತೆಯಲ್ಲಿ ಲಗತ್ತಿಸಿ ಕಳುಹಿಸತಕ್ಕದ್ದು.